ವಿಷಯ : ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಪಶುವೈದ್ಯ ಆಸ್ಪತ್ರೆಗಳ ಮಂಜೂರಾತಿ.

1060

ಶ್ರೀ ಸಿ. ವೀರಬದ್ರಯ್ಯ (ಕೊರಟಗೆರೆ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು, ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಗಳಿಗೆ ಹೊಸದಾಗಿ ಮಂಜೂರು ಮಾಡಿರುವ ಪಶುವೈದ್ಯ ಆಸ್ಪತ್ರೆಗಳೆಷ್ಟು? (ವರ್ಷಾವಾರು, ತಾಲ್ಲೂಕುವಾರು, ಅಂಕಿ ಅಂಶಗಳ ವಿವರ ನೀಡುವುದು)

ಆ) ಕೊರಟೆಗೆರೆ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಪಶು ವೈದ್ಯ ಆಸ್ಪತ್ರೆ ಮಂಜೂರು ಮಾಡಿರುವ ಗ್ರಾಮಗಳಾವುವು?

ಶ್ರೀ ಕೆ.ಎನ್.ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಅ)

ತುಮಕೂರು ಕ್ಷೇತ್ರ	2
ಬೆಳ್ಳಾವಿ	ಇಲ್ಲ.
ಕೊರಟೆಗೆರೆ	3
ಮಧುಗಿರಿ	3
ಪಾವಗಡ	1
ಸಿರಾ	2
ಕಳ್ಳಂಬೆಳ್ಳ	2
ಚಿಕ್ಕನಾಯಕನಹಳ್ಳಿ	4
ತುರುವೆಕೆರೆ	2
ತಿಪಟೂರು	5
ಗುಬ್ಬಿ	4
ಕುಣಿಗಲ್	1
ಹುಲಿಯೂರು ದುರ್ಗ	ಇಲ್ಲ.

(ವರ್ಷಾವಾರು , ತಾಲ್ಲೂಕುವಾರು ಅಂಕಿ ಅಂಶಗಳ ವಿವರ ನೀಡಿದೆ)

ಆ)
1. ಅರಸಾಪುರ
2. ಮಳಸೀಕೆರೆ
3. ಬೀಡಿಕಪುರ

ಶ್ರೀ .ಸಿ. ವೀರಭದ್ರಯ್ಯ, ವಿಧಾನಸಭಾ ಸದಸ್ಯರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1060 ಅನುಬಂಧ

ತುಮಕೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಪ್ರಾರಂಭಿಸಿರುವ ಪಶು ಚಿಕಿತ್ಸಾಲಯಗಳ ವಿವರ ಕೆಳಕಂಡತಿದೆ.

	ವರ್ಷ	ಪ್ರಾ. ಪ. ಚಿಕಿತ್ಸಾ ಕೇಂದ್ರಗಳ ಪ್ರಾರಂಭ	ಉನ್ನತೀಕರಣ
1.	89-90	7	-
2.	90-91	10	11
3.	91-92	12	1

ತುಮಕೂರು ಜಿಲ್ಲೆ ಕ್ಷೇತ್ರವಾರು ಪಶು ಚಿಕಿತ್ಸಾಲಯಗಳ ಪ್ರಾರಂಭ ಹಾಗೂ ಉನ್ನತೀಕರಣ ಕೆಳಕಂತಿದೆ.

ಕ್ರಮ ಸಂಖ್ಯೆ	ಕ್ಷೇತ್ರ	ಪ್ರಾರಂಭಿಸುವುದು	ಉನ್ನತೀಕರಿಸಿರುವುದು
1.	ತುಮಕೂರು	ಹೊಸಕೆರೆ ಕೊಂದೆಗೆರೆ	ಹೊನ್ನುಡಿಕೆ ಉರುಕೆರೆ
2.	ಬೆಳ್ಳಾವಿ	-	ಬೆಳ್ಳಾವಿ
3.	ಕೊರಟೆಗೆರೆ	ಅರಸಾಪುರ ಯಳಚೀಗೆರೆ ಬೀದಿಪುರ	ಕೋಲಾಲ
4.	ಮಧುಗಿರಿ	ಧಭೆಘಟ್ಟ ಕೈವಾರ ಕಸಗತ್ತೂರು	ಐ.ಡಿ.ಹಳ್ಳಿ
5.	ಪಾವಗಡ	ಪದವಳ್ಳಿ	ಲಿಂಗನಹಳ್ಳಿ
6.	ಶಿರಾ	ದ್ವಾರನ ಕುಂಟೆ ಲಿಕ್ಕನಹಳ್ಳಿ	ಪಟ್ಟನಾಯ್ಕನಹಳ್ಳಿ
7.	ಕಳ್ಳಂಬೆಳ್ಳ	ಕೊಂಡಾಲಮ್ಮನ ದೇವಸ್ಥಾನ ಉಮಿಲುಡೂರೆ	-
8.	ಚಿಕ್ಕನಾಯಕನ ಹಳ್ಳಿ	ದಬ್ಬಿಕುಂಟೆ ಬಾರಗೂರು ಗುಟ್ಟೇಹಳ್ಳಿ ಜಯಸೀಪುರ	ಹಂಪನಕೆರೆ
9.	ತುರವೆಕೆರೆ	ಮಾಬೇನಹಳ್ಳಿ ಲಿಂಚೆಹಳ್ಳಿ	-
10.	ತಿಪಟೂರು	ಹೊಂಗೆಲಕ್ಷೀ ಕ್ಷೇತ್ರ ಗುರುಗದಹಳ್ಳಿ ಹಾಲೆತುರ್ಕ ರಂಗಾಪುರ ಹುಣಸೇಘಟ್ಟ	ಹೊನ್ನಾವಳ್ಳಿ

11.	ಗುಬ್ಬಿ	ಡಿ. ರಾಂಪುರ ಬೇಳೂರು ಕೆ.ಜಿ.ಟಿಂಪಲ್ ಮಂಚಲದೊರೆ	ಸಿ.ಎನ್.ಪುರ
12.	ಕುಣಿಗಲ್	ಕೊಡವತ್ತಿ	ಉಜ್ಜಾನಿ ಕಾವರೆಕೆರೆ
13.	ಹುಲಿಯೂರು ದುರ್ಗ	-	-

ವಿಷಯ : ರಾಜ್ಯದಲ್ಲಿ ಕಂಪ್ಯೂಟರ್ ವಿಜ್ಞಾನ ಭೋದಿಸುವ ಸಂಸ್ಥೆಗಳ ಸಂಖ್ಯೆ.

1064

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಂಪ್ಯೂಟರ್ ವಿಜ್ಞಾನ ಭೋಧಿಸುವ ಸಂಸ್ಥೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)?

ಆ) ಈ ಸಂಸ್ಥೆಗಳನ್ನು ಪ್ರಾಂಭಿಸುವ ಮೊದಲು ಸರ್ಕಾರದ ಅನುಮತಿ ಪಡೆಯುವ ಬಗ್ಗೆ ಯಾವುದಾದರೂ ನಿಯಮವಿದೆಯೇ?

ಇ) ಈ ಸಂಸ್ಥೆಗಳು ಅಳತೆಮೀರಿ ವಿದ್ಯಾಶುಲ್ಕವನ್ನು ಪಡೆಯುತ್ತಿದ್ದು ಮೂಲಭೂತ ಸೌಲಭ್ಯಗಳನ್ನು ಒದಗಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಸಂಸ್ಥೆಗಳಿಗೆ ಅನುಮತಿ ನೀಡಿ ಅವುಗಳ ಕಾರ್ಯವೈಖರಿಯ ಬಗ್ಗೆ ಗಮನವಿಡಲು ಒಂದು ಕಂಪ್ಯೂಟರ್ ಅಕಾಡೆಮಿಯನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾಪವಿದೆಯೇ?

ಶ್ರೀ ಎಸ್.ಎಂ.ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಅಂತಹ ಯಾವುದೇ ಸಂಸ್ಥೆಗಳು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ನಡೆಯುತ್ತಿಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ಇಲ್ಲ.

ವಿಷಯ : ತಾಂತ್ರಿಕ ಕೋರ್ಸ್‌ಗಳ ಬಗ್ಗೆ ಶ್ರೀ ರಾಮೇಗೌಡ ಸಮಿತಿ.

1066

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ಶ್ರೀ ರಾಮೆಗೌಡ ಸಮಿತಿಯು ತಾಂತ್ರಿಕ ಕೋರ್ಸ್‌ಗಳನ್ನು ಅಳವಡಿಸವ ಬಗ್ಗೆ ವರದಿಯನ್ನು ಸಲ್ಲಿಸಿದೆಯೇ?